# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 1669(1967) |
| ಸದಸ್ಯರ ಹೆಸರು : | ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 24.03.2026 |
| ಉತ್ತರಿಸುವವರು : | ಪೌರಾಡಳಿತ ಮತ್ತು ಹಜ್ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಸಿವಿಕ್ ಅಮೆನಿಟಿ (ಸಿ.ಎ) ನಿವೇಶನಗಳನ್ನು ರಾಜಕೀಯ ಪಕ್ಷಗಳ ಕಛೇರಿಗಳಿಗೆ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಳೆದ 2 ವರ್ಷಗಳಲ್ಲಿ ಯಾವ ಯಾವ ನಗರಗಳಲ್ಲಿ ಸಿ.ಎ ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಹಾಗೂ ಮಂಜೂರಾತಿಗೆ ಅನುಸರಿಸಿದ ಮಾನದಂಡಗಳೇನು;</td><td>ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಳೆದ 2 ವರ್ಷಗಳಲ್ಲಿ ರಾಜಕೀಯ ಪಕ್ಷಗಳ ಕಛೇರಿಗಳಿಗೆ ಸಿ. ಎ ನಿವೇಶನಗಳನ್ನು ಮಂಜೂರು ಮಾಡಿರುವ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಾದ ಸಿ.ಎ ನಿವೇಶನಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 01 ಟಿಎಂಡಿ 2018, ದಿನಾಂಕ: 30.1.2018 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: UDD 27 TTP 2016, Dated: 18.11.2016 ರೀತ್ಯಾ ಮಂಜೂರಾತಿ ನೀಡಲಾಗುತ್ತಿದೆ.</td></tr>
<tr><td>ಆ)</td><td>ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಾದ ಸಿ.ಎ ನಿವೇಶನಗಳನ್ನು ರಾಜಕೀಯ ಪಕ್ಷಗಳಿಗೆ ನೀಡುವುದು ಪೌರಾಡಳಿತ ನಿಯಮಗಳಿಗೆ ವಿರುದ್ಧವಲ್ಲವೇ; ಇಂತಹ ಮಂಜೂರಾತಿಗಳಿಗೆ ಕಾನೂನುಬದ್ಧ ಆಧಾರವೇನು;</td><td rowspan="3">ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಸಿ ಎ ನಿವೇಶನಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 01 ಟಿಎಂಡಿ 2018, ದಿನಾಂಕ: 30.1.2018 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: UDD 27 TTP 2016, Dated: 18.11.2016 ರೀತ್ಯಾ ಮಂಜೂರಾತಿ ನೀಡಲಾಗುತ್ತಿದೆ.<br><br>ರಾಜಕೀಯ ಪಕ್ಷಗಳಿಗೆ ಸಿ ಎ ನಿವೇಶನಗಳನ್ನು ನೀಡಬೇಕಾದಲ್ಲಿ ನಿಯಮಾನುಸಾರ ಸಚಿವ ಸಂಪುಟದ ಅನುಮೋದನೆ ಪಡೆದು ಮಂಜೂರಾತಿ ನೀಡಲಾಗಿದೆ.</td></tr>
<tr><td>ಇ)</td><td>ಸಿ.ಎ ನಿವೇಶನಗಳನ್ನು ರಾಜಕೀಯ ಉದ್ದೇಶಗಳಿಗೆ ಬಳಸಿದಲ್ಲಿ ಸ್ಥಳೀಯ ನಾಗರೀಕರಿಗೆ ದೊರೆಯಬೇಕಾದ ಸಾರ್ವಜನಿಕ ಸೌಲಭ್ಯಗಳು ಕುಂಠಿತವಾಗುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಪರಿಶೀಲಿಸಲು ಸರ್ಕಾರ ಯಾವುದೇ ತನಿಖೆ ಅಥವಾ ಸಮಿತಿ ರಚಿಸಿರುವುದೇ;</td></tr>
<tr><td>ಈ)</td><td>ರಾಜಕೀಯ ಪಕ್ಷಗಳಿಗೆ ಮಂಜೂರಾದ ಸಿ.ಎ ನಿವೇಶನಗಳ ಹಂಚಿಕೆ ಪ್ರಕ್ರಿಯೆ ಪಾರದರ್ಶಕವಾಗಿರುವುದೇ; ಎಲ್ಲಾ ರಾಜಕೀಯ ಪಕ್ಷಗಳಿಗೆ ಸಮಾನ ಅವಕಾಶ ನೀಡಲಾಗಿದೆಯೇ; ಇಲ್ಲವಾದಲ್ಲಿ ಸರ್ಕಾರ ಈ ಕುರಿತು ಸ್ಪಷ್ಟನೆ ನೀಡುವುದು?</td></tr>
</table>

ಇ-ಸಂಖ್ಯೆ: ನಅಇ 127 ಜಿಇಎಲ್ 2026 (ಇ)

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು.

## LCQ 1669 (1967) ಶ್ರೀ ಡಿ ಎಸ್ ಅರುಣ್ ರವರ ಪ್ರಶ್ನೆಗೆ ಅನುಬಂಧ

| ಕ್ರ.ಸಂ | ಜಿಲ್ಲೆಯ ಹೆಸರು | ಪ್ರಸ್ತಾವನೆ ಸ್ವೀಕೃತವಾಗಿರುವ ನಗರ ಸ್ಥಳೀಯ ಸಂಸ್ಥೆಯ ಹೆಸರು | ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿರುವ ನಗರ ಸ್ಥಳೀಯ ಸಂಸ್ಥೆಯ ಹೆಸರು | ಸರ್ಕಾರದಿಂದ ಅನುಮೋದನೆ ಯಾಗಿರುವ ವಿವರ |
|---|---|---|---|---|
| 1 | ಬಾಗಲಕೋಟೆ | ಲೋಕಾಪುರ | ಲೋಕಾಪುರ ಪಟ್ಟಣ ಪಂಚಾಯಿತಿ | GO No.UDD 8 TMD 25 Dtd 14.10.2025 |
| 2 | ಧಾರವಾಡ | ನವಲಗುಂದ | ನವಲಗುಂದ ಪುರಸಭೆ | GO No.UDD 11 TMD 25 Dtd 14.10.2025 |
| 3 | ಧಾರವಾಡ | ಅಣ್ಣಿಗೇರಿ | ಅಣ್ಣಿಗೇರಿ ಪುರಸಭೆ | GO No.UDD 11 TMD 25 Dtd 14.10.2025 |
| 4 | ಕಲಬುರಗಿ | ಅಫಜಲಪೂರ | ಅಫಜಲಪೂರ ಪುರಸಭೆ | GO No.UDD 11 TMD 25 Dtd 14.10.2025 & GO No.UDD 36 TMD 25 Dtd 13.01.2026 |
| 5 | ಉತ್ತರ ಕನ್ನಡ | ಹಳಿಯಾಳ | ಹಳಿಯಾಳ ಪುರಸಭೆ | GO No.UDD 24 TMD 25 Dtd 15.12.2025 |
| 6 | ಶಿವಮೊಗ್ಗ | ಆನವಟ್ಟಿ | ಆನವಟ್ಟಿ ಪಟ್ಟಣ ಪಂಚಾಯಿತಿ | GO No.UDD 24 TMD 25 Dtd 15.12.2025 |
| 7 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | ದೇವನಹಳ್ಳಿ ಪುರಸಭೆ | GO No.UDD 36 TMD 25 Dtd 13.01.2026 |
| 8 | ಕಲಬುರಗಿ | ಕಾಳಗಿ | ಕಾಳಗಿ ಪಟ್ಟಣ ಪಂಚಾಯಿತಿ | GO No.UDD 36 TMD 25 Dtd 13.01.2026 |
| 9 | ಕಲಬುರಗಿ | ಚಿಂಚೋಳಿ | ಚಿಂಚೋಳಿ ಪುರಸಭೆ | GO No.UDD 36 TMD 25 Dtd 13.01.2026 |

18/3/26
ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು